## ಮೂರನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ, ಮೈಸೂರು.

## Spl.C.78/2019

**P.W.-02**
**C.W.-02**

| | | |
|---|---|---|
| ಹೆಸರು | : | Dhanalakshmi M.C. |
| ಗಂಡನ ಹೆಸರು | : | V.K.Chandrashekar |
| ವಯಸ್ಸು | : | 43 ವರ್ಷ |
| ಉದ್ಯೋಗ | : | Jr. Training Officer |
| ವಾಸಸ್ಥಳ | : | Mysuru |

**ದಿನಾಂಕಃ22.12.2021 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಮುಖ್ಯ ವಿಚಾರಣೆಃ ಮಾನ್ಯ ವಿಶೇಷ ಸರ್ಕಾರಿ ಅಭಿಯೋಜಕರಿಂದ ಃ –**

1. ನಾನು ಫೆಬ್ರವರಿ–2012 ರಿಂದ ಸರ್ಕಾರಿ ಕೈಗಾರಿಕಾ ತರಬೇತಿ ಸಂಸ್ಥೆ, ಎನ್.ಆರ್. ಮೊಹಲ್ಲಾದಲ್ಲಿ ಕಿರಿಯ ತರಬೇತಿ ಅಧಿಕಾರಿಯಾಗಿ ಕರ್ತವ್ಯ ನಿರ್ವಹಿಸಿರುತ್ತೇನೆ. ದಿಃ 14.07.2017 ರಂದು ನನ್ನನ್ನು ನಮ್ಮ ಮೇಲಾಧಿಕಾರಿಗಳು ಎಸಿಬಿ ಕಛೇರಿಗೆ ಹೋಗುವಂತೆ ಸೂಚನೆ ನೀಡಿದರು, ಅದರಂತೆ ನಾನು ಮೈಸೂರಿನ ಎಸಿಬಿ ಕಛೇರಿಗೆ ಮಧ್ಯಾಹ್ನ 3.30 ಗಂಟೆಗೆ ಹೋದೆವು. ಅಲ್ಲಿ ಚಾಸಾ–3 ನಾಗರಾಜು ಮತ್ತು ಚಾಸಾ–1 ನಿಂಗರಾಜು ಇದ್ದರು.

2. ಎಸಿಬಿ ಪೋಲೀಸ್, ಡಿವೈಎಸ್‌ಪಿ ಚಾಸ–16 ಜಿಎಸ್ ಗಜೇಂದ್ರ ಪ್ರಸಾದ್ ಇದ್ದು ನನ್ನನ್ನು ಚಾಸಾ–1 ಮತ್ತು 3 ರವರನ್ನು ಪರಸ್ಪರ ಪರಿಚಯ ಮಾಡಿಕೊಟ್ಟರು. ಚಾಸಾ–1 ನೀಡಿದ್ದ ದೂರನ್ನು ನನಗೆ ಹಾಗೂ ಚಾಸಾ–3 ರವರಿಗೆ ಓದಲು ಕೊಟ್ಟರು.

3. ಚಾಸಾ–1 ರವರು ಕೆಸರೆ ಗ್ರಾಮದ ಸರ್ವೆ ನಂ,610/4 ಮತ್ತು 610/6 ರ ಜಮೀನಿನ ಬಗ್ಗೆ Alienation ಮಾಡಿಕೊಡಲು ರೂ.55,000/–ರೂ.ಗಳ ಲಂಚದ ಬೇಡಿಕೆಯನ್ನು ಆರೋಪಿ ಮಾಡಿದ್ದಾರೆ ಎಂದು ಚಾಸಾ–1 ದೂರಿನಲ್ಲಿ ನಮೂದಿಸಿದ್ದರು.

4. ಎಸಿಬಿ ಪೋಲೀಸರು ನನಗೆ ಪಂಚಸಾಕ್ಷಿಯಾಗಿ ಪ್ರಕರಣದಲ್ಲಿ ಸಹಕರಿಸಲು ಕೋರಿಕೊಂಡರು. ಮತ್ತು ನಾನು ಸಾಕ್ಷಿ–1 ಹಾಗೂ ಚಾಸಾ–3 ನೆರಳು ಸಾಕ್ಷಿಯಾಗಿ ನೇಮಿಸಿದರು.

5. ಚಾಸಾ–1 ತಂದಿದ್ದ ರೂ.500/–ರೂ.ಗಳ 32 ನೋಟುಗಳನ್ನು ಮತ್ತು ರೂ.2,000/– 7 ನೋಟುಗಳನ್ನು ನನಗೆ ಎಣಿಸಲು ಕೊಟ್ಟರು. ಸದರಿ ನೋಟುಗಳನ್ನು ನಾನು ಎಣಿಸಿ, ನೋಟುಗಳ ಸಂಖ್ಯೆಗಳನ್ನು ಚಾಸಾ–3 ಬರೆದುಕೊಂಡರು. ಚಾಸಾ–3 ನೋಟುಗಳನ್ನು ಬರೆದುಕೊಂಡ ಹಾಳೆಯನ್ನು ಈಗ ನಾನು ನೋಡುತ್ತಿದ್ದು ಅದನ್ನು ನಿಪಿ–18 ಎಂದು ಮತ್ತು ಅದರಲ್ಲಿರುವ ನನ್ನ ಸಹಿಯನ್ನು ನಿಪಿ–18(ಎ) ಎಂದು ಗುರುತಿಸಲಾಯಿತು. ಎಸಿಬಿ ಸಿಬ್ಬಂದಿ ಸದರಿ ನೋಟುಗಳಿಗೆ ಫಿನಾಫ್ತಲಿನ್ ಪೌಡರನ್ನು ಹಚ್ಚಿದರು. ನಂತರ ನಾನು ಸದರಿ ನೋಟುಗಳನ್ನು ಎಣಿಸಿ ಚಾಸಾ–1 ರ ಶರ್ಟಿನ ಬಲಭಾಗದ ಜೇಬಿಗೆ ಇಟ್ಟೆನು. ಎಸಿಬಿ ಪೋಲೀಸರು ಚಾಸಾ–1 ರವರಿಗೆ ಸದರಿ ಹಣವನ್ನು ಯಾವ ಕಾರಣಕ್ಕೂ ಹಣವನ್ನು ಮುಟ್ಟಬಾರದು ಆರೋಪಿಯು ಕೇಳಿದರೆ ಮಾತ್ರ ಹಣವನ್ನು ಕೊಡಬೇಕು ಹಾಗೂ ಹಣವನ್ನು ಕೊಟ್ಟ ನಂತರ ಹೊರಗಡೆ ಬಂದು ತಲೆಯನ್ನು ಬಲಕೈಯಿಂದ ಸವರಿಕೊಂಡು ಸೂಚನೆಯನ್ನು ನೀಡುವಂತೆ ತಿಳಿಸಿದರು.

6. ಚಾಸಾ–3 ರವರಿಗೆ ಚಾಸಾ–1 ರವರೊಂದಿಗೆ ಇರುವಂತೆ ಸೂಚಿಸಲಾಯಿತು. ಚಾಸಾ–1 ರವರ ಅಂಗಶೋಧನೆಯನ್ನು ಮಾಡಲಾಯಿತು ಹಾಗೂ ಸೋಡಿಯಂ ಕಾರ್ಬೋನೆಟ್‌ನ ಮಹತ್ವವನ್ನು ನಮಗೆ ತಿಳಿಸಿದರು.

7. ನಂತರ ಎಸಿಬಿ ಪೋಲೀಸರು ಸೋಡಿಯಂ ಕಾರ್ಬೋನೆಟ್ ದ್ರಾವಣವನ್ನು ತಯಾರಿಸಿದರು. ಸೋಡಿಯಂ ಕಾರ್ಬೋನೆಟ್ ದ್ರಾವಣದಲ್ಲಿ ನನ್ನ ಕೈಗಳನ್ನು ತೊಳೆಸಿದರು. ಸದರಿ ದ್ರಾವಣವು ತಿಳಿಗುಲಾಬಿ ಬಣ್ಣಕ್ಕೆ ತಿರುಗಿತು. ಮಾದರಿ ದ್ರಾವಣವನ್ನು ಹಾಗೂ ಬಣ್ಣ ಬದಲಾದ ದ್ರಾವಣವನ್ನು ಪ್ರತ್ಯೇಕ ಬಾಟಲಿಗೆ ಹಾಕಿ ಸೀಲ್ ಮಾಡಲಾಯಿತು. ಮಾದರಿ ದ್ರಾವಣವನ್ನು ಮು.ಮಾ.3 ಹಾಗೂ ಬಣ್ಣ ಬದಲಾದ ದ್ರವಣವನ್ನು ಮು.ಮಾ.1 ಎಂದು ಗುರುತಿಸಲಾಗಿದೆ. ಮಾದರಿ ಫಿನಾಪ್ತಲಿನ್ ಪೌಡರನ್ನು ಕವರಿಗೆ ಹಾಕಿ ಸೀಲ್ ಮಾಡಲಾಯಿತು. ಅದನ್ನು ನಾನು ನೋಡುತ್ತಿದ್ದು ಆ ಫಿನಾಪ್ತಲಿನ್

ಪೌಡರನ್ನು ಮು.ಮಾ-2 ಎಂದು ಗುರುತಿಸಲಾಗಿದೆ. ಈ ಪ್ರಕ್ರಿಯೆಯ ಫೋಟೋಗಳನ್ನು ತೆಗೆಯಲಾಯಿತು. ನಂತರ ನಾವು ನಮ್ಮ ಕೈಗಳನ್ನು ನೀರಿನಲ್ಲಿ ಸೋಪು ಹಾಕಿ ತೊಳೆದುಕೊಂಡೆವು.

8. ಚಾಸಾ-1 ರವರು ಹಾಜರು ಪಡಿಸಿದ ಮೊಬೈಲ್ ಮೆಮರಿ ಚಿಪನ್ನು ಕಾರ್ಡ್ ರೀಡರ್ ಮೂಲಕ ಲ್ಯಾಪ್ ಟಾಪಿಗೆ ಹಾಕಿ ನೋಡಿದಾಗ ಅದರಲ್ಲಿ ಆರೋಪಿ ಮತ್ತು ಚಾಸಾ-1ರವರು ಸಂಭಾಷಣೆ ಇತ್ತು ಅದನ್ನು 2 ಸಿಡಿಗಳಿಗೆ ಕಾಪಿ ಮಾಡಲಾಯಿತು. ಸದರಿ ಮೆಮರಿ ಚಿಪ್ ಹಾಗೂ ಸಿಡಿಗಳನ್ನು ಪ್ರತ್ಯೇಕ ಕವರಿಗೆ ಹಾಕಿ ಮೊಹರು ಮಾಡಲಾಯಿತು. ಈಗ ಮು.ಮಾ.5 ನ್ನು ನೋಡುತ್ತಿದ್ದು ಅದು ಮೆಮರಿ ಚಿಪ್ ಇರುವ ಕವರ್ ಆಗಿರುತ್ತದೆ. ಮು.ಮಾ.4 ಮತ್ತು 14 ಸದರಿ 2 ಸಿಡಿಗಳಿರುವ ಮೊಹರು ಮಾಡಿದ ಕವರು ಆಗಿರುತ್ತದೆ.

9. ಸ್ಥಳದಲ್ಲಿ ಚಾಸಾ-1 ಒಂದು ವಾಯ್ಸ್ ರೆಕಾರ್ಡರ್ ನ್ನು ಕೊಟ್ಟು ಅದನ್ನು ಉಪಯೋಗಿಸುವ ವಿಧಾನವನ್ನು ತಿಳಿಸಲಾಯಿತು.

10. ಸ್ಥಳದಲ್ಲಿ ಪ್ರಾಯೋಗಿಕ ಪಂಚನಾಮೆ ತಯಾರಿಸಲಾಯಿತು. ಅದು ನಿಪಿ-13 ಆಗಿದ್ದು ನಿಪಿ-13ರಲ್ಲಿರುವ ನನ್ನ ಸಹಿಯನ್ನು ನಿಪಿ-13(ಬಿ) ಎಂದು ಗುರುತಿಸಲಾಗಿದೆ. ಈಗ ನಾನು ನಿಪಿ-3 ರಿಂದ 7 ಪ್ರಾಯೋಗಿಕ ಪಂಚನಾಮೆಯ ಕಾಲದಲ್ಲಿ ತೆಗೆದ ಫೋಟೊಗಳು ಆಗಿರುತ್ತದೆ ತೆಗೆಯಲಾಯಿತು.

11. ನಂತರ ನಾವು ಸಂಜೆ 6-30 ಗಂಟೆಗೆ ಎಸಿಬಿ ಠಾಣೆಯನ್ನು ಬಿಟ್ಟು ಎರಡು ವಾಹನಗಳಲ್ಲಿ ತಾಲ್ಲೂಕ್ ಕಛೇರಿ, ನಜರ್‌ಬಾದ್‌ಗೆ ಹೋದೆವು. ಚಾಸಾ-1 ಹಾಗೂ 3ರವರನ್ನು ಕಛೇರಿಯ ಒಳಗಡೆ ಕಳುಹಿಸಿ, ನಾವು ಸದರಿ ಕಛೇರಿಯ ಆವರಣದಲ್ಲಿ ಹೊರಗೆ ಸೂಚನೆಗಾಗಿ ಕಾಯುತ್ತಿದ್ದೆವು.

12. ನಂತರ ಚಾಸಾ-1 ಸುಮಾರು 7.00 ಗಂಟೆಗೆ ಹೊರಗೆ ಬಂದು ಸೂಚನೆ ನೀಡಿದರು. ನಂತರ ನಾವೆಲ್ಲರೂ ಕಛೇರಿಯ ಒಳಗಡೆ ಹೋದಾಗ ಚಾಸಾ-1ರವರು ಆರೋಪಿಯನ್ನು ತೋರಿಸಿ ಅವರು ತನ್ನಿಂದ ಲಂಚದ ಹಣವನ್ನು ಎಡಗೈಯಲ್ಲಿ ಪಡೆದು ಅವರ ಪ್ಯಾಂಟಿನ ಎಡಜೇಬಿಗೆ ಹಾಕಿದ್ದಾರೆ

ಎಂದು ತಿಳಿಸಿದರು. ಇಬ್ಬರು ಎಸಿಬಿ ಸಿಬ್ಬಂದಿಗಳು ಆರೋಪಿಯ ಎರಡು ಕೈಗಳನ್ನು ಹಿಡಿದುಕೊಂಡರು. ಈ ದಿನ ನ್ಯಾಯಾಲಯದ ಮುಂದಿರುವ ಆರೋಪಿ ನಾನು ಮೇಲೇ ಹೇಳಿದ ಆರೋಪಿಯಾಗಿರುತ್ತಾರೆ.

13. ಎಸಿಬಿ ಪೋಲೀಸರು ದ್ರಾವಣವನ್ನು ಪ್ರತ್ಯೇಕ 4 ಗಾಜಿನ ಬೌಲಿನಲ್ಲಿ ತಯಾರಿಸಿ ಆರೋಪಿಯ ಎರಡು ಕೈಗಳನ್ನು ಪ್ರತ್ಯೇಕ ಬೌಲಿನಲ್ಲಿ ಇದ್ದ ದ್ರಾವಣದಲ್ಲಿ ತೊಳೆಸಿದರು. ಅವರ ಎಡಗೈಯನ್ನು ತೊಳೆದ ಸದರಿ ದ್ರಾವಣವು ತಿಳಿಗುಲಾಬಿ ಬಣ್ಣಕ್ಕೆ ತಿರುಗಿತು. ಬಲಗೈಯನ್ನು ತೊಳೆದ ದ್ರಾವಣದ ಬಣ್ಣ ಬದಲಾಗಿರುವುದಿಲ್ಲ. ಸದರಿ ದ್ರಾವಣಗಳನ್ನು ಪ್ರತ್ಯೇಕ ಬಾಟಲಿಗಳಿಗೆ ಹಾಕಿ ಸೀಲ್ ಮಾಡಲಾಯಿತು. ಸ್ಯಾಂಪಲ್ ದ್ರಾವಣವನ್ನು ಪ್ರತ್ಯೇಕ ಬಾಟಲಿಗೆ ಹಾಕಿ ಮೊಹರು ಮಾಡಲಾಯಿತು. ಮಾದರಿ ದ್ರಾವಣವಿರುವ ಬಾಟನನ್ನು ಮು.ಮಾ.6 ಎಂದು ಗುರುತಿಸಲಾಯಿತು. ಬಲಗೈ ತೊಳೆದ ದ್ರಾವಣವನ್ನು ಮು.ಮಾ-7 ಹಾಗೂ ಎಡಗೈ ತೊಳೆದ ದ್ರಾವಣವನ್ನು ಮು.ಮಾ-8 ಎಂದು ಗುರುತಿಸಲಾಯಿತು. ಸದರಿ ಬಾಟಲಿಗಳ ಮೇಲೆ ನಮ್ಮ ಸಹಿ ಇರುವ ಚೀಟಿಯನ್ನು ಅಂಟಿಸಲಾಗಿದೆ.

14. ಲಂಚದ ಹಣವನ್ನು ಆರೋಪಿಯು ತನ್ನ ಪ್ಯಾಂಟಿನ ಜೇಬಿನಿಂದ ತೆಗೆದು ಹಾಜರು ಪಡಿಸಿದರು. ಸದರಿ ನೋಟುಗಳ ನಂಬರ್ ಗಳನ್ನು ನಿಪಿ-18 ರಲ್ಲಿ ಬರೆದಿರುವ ನಂಬರ್ ಗಳಿಗೆ ತಾಳೆ ಮಾಡಿದಾಗ ಅವು ತಾಳೆ ಹೊಂದುತ್ತಿದ್ದವು. ಸದರಿ ಹಣವನ್ನು ಎಸಿಬಿ ಪೊಲೀಸ್ ನಿರೀಕ್ಷಕರು ವಶಪಡಿಸಿಕೊಂಡರು.

15. ಪೋಲೀಸರು ಆರೋಪಿಗೆ ಬದಲಿ ಪ್ಯಾಂಟಿನ ವ್ಯವಸ್ಥೆ ಮಾಡಿ, ಪ್ಯಾಂಟ್‌ನ ಎಡಭಾಗದ ಜೇಬನ್ನು ಪೋಲೀಸರು ದ್ರಾವಣದಲ್ಲಿ ತೊಳೆಸಿದರು. ಸದರಿ ದ್ರಾವಣವು ಗಾಢ ಗುಲಾಬಿ ಬಣ್ಣಕ್ಕೆ ತಿರುಗಿತು. ಸದರಿ ದ್ರಾವಣವನ್ನು ಬಾಟಲಿಗೆ ಹಾಕಿ ಸೀಲ್ ಮಾಡಲಾಯಿತು. ಸದರಿ ದ್ರಾವಣವನ್ನು ಮು.ಮಾ-11 ಎಂದು ಗುರುತಿಸಲಾಗಿದೆ. ಪ್ಯಾಂಟನ್ನು ಪೋಲೀಸರು ಅಮಾನತ್ತುಪಡಿಸಿಕೊಂಡರು. ಸದರಿ ಪ್ಯಾಂಟನ್ನು ಸಾಕ್ಷಿಯು ನೋಡಿ ಗುರುತಿಸಿದ್ದು ಅದು ಮು.ಮಾ-12 ಎಂದು ಗುರುತಿಸಲಾಗಿದೆ.

16. ಆರೋಪಿಯ ಸಮಜಾಯಿಷಿಯನ್ನು ಸ್ಥಳದಲ್ಲಿ ಪಡೆದಿದ್ದು ಆರೋಪಿಯು ತನಗೆ ಚಾಸಾ-1 ರವರು ತಾನು ಟಿ.ನರಸೀಪುರದಲ್ಲಿದ್ದಾಗ ಹಳೆಯ ಸ್ನೇಹಿತರಾಗಿದ್ದು ಆರೋಪಿಯು ತನಗೆ ದೂರವಾಣಿ ಕರೆಮಾಡಿ ಭೇಟಿಯಾಗಲು ಬಂದಿದ್ದು ನಾನು ಅದರಂತೆ ಅವರನ್ನು ಭೇಟಿ ಮಾಡಿದ್ದು

ಅವರಿಂದ ಯಾವುದೇ ಲಂಚದ ಹಣವನ್ನು ನಾನು ಪಡೆದಿಲ್ಲ ಎಂದು ಹೇಳಿರುತ್ತಾರೆ. ಚಾಸಾ–1 ಸದರಿ ಸಮಜಾಯಿಷಿಯು ಸುಳ್ಳಿನಿಂದ ಕೂಡಿರುತ್ತದೆ ಎಂದು ನುಡಿದರು. ಆರೋಪಿಯು ನೀಡಿದ ಸಮಜಾಯಿಷಿ ನಿಪಿ–16 ಎಂದು ಗುರುತಿಸಲಾಗಿದ್ದು ಅದರಲ್ಲಿರುವ ನನ್ನ ಸಹಿಯನ್ನು ನಿಪಿ–16(ಎ) ಎಂದು ಗುರುತಿಸಲಾಯಿತು.

17. ಚಾಸಾ–1 ರವರಿಗೆ ನೀಡಿದ ವಾಯ್ಸ್ ರೆಕಾರ್ಡರನ್ನು ಎಸಿಬಿ ಪೋಲೀಸರು ಹಿಂಪಡೆದುಕೊಂಡರು. ಸದರಿ ವಾಯ್ಸ್ ರೆಕಾರ್ಡರ್ ನಲ್ಲಿದ್ದ ಸಂಭಾಷಣೆಯನ್ನು ಲ್ಯಾಪ್ ಟಾಪ್ ಮೂಲಕ ನಮಗೆ ಹಾಕಿ ಕೇಳಿಸಿದರು. ಸದರಿ ವಾಯ್ಸ್ ರೆಕಾರ್ಡರಿನಲ್ಲಿದ್ದ ಆರೋಪಿಯ ಧ್ವನಿಯನ್ನು ಚಾಸಾ–4 ತಹಸೀಲ್ದಾರ್ ರಮೇಶ್ ಬಾಬುರವರು ಗುರುತಿಸಿದರು. ಸದರಿ ವಾಯ್ಸ್ ರೆಕಾರ್ಡರ್ ನಲ್ಲಿದ್ದ ಸಂಭಾಷಣೆಯನ್ನು ಸಿಡಿಗೆ ಪರಿವರ್ತಿಸಲಾಯಿತು. ಸದರಿ ಸಂಭಾಷಣೆಯಲ್ಲಿ ಆರೋಪಿಯು ತನಗೆ ಸ್ವಲ್ಪ ಹಣ ಕೊಟ್ಟಿದ್ದಾರೆ, ಇದು ಸಾಕಾಗಲ್ಲ ಎಂದು ಹೇಳಿರುವುದು ಕಂಡು ಬಂತು.

18. ಚಾಸಾ–1 ರವರಿಗೆ ಸಂಬಂಧಿಸಿದಂತೆ ದಾಖಲೆಗಳನ್ನು ಎಸಿಬಿ ಪೋಲೀಸರಿಗೆ ಆರೋಪಿಯು ತೆಗೆದು ಕೊಟ್ಟಿದ್ದು ಅದನ್ನು ಚಾಸಾ–4 ರವರು ಅದರ ಪ್ರತಿಗಳನ್ನು ದೃಢೀಕರಿಸಿ ನೀಡಿರುತ್ತಾರೆ. ಸದರಿ ದಾಖಲೆಗಳನ್ನು ಈಗಾಗಲೇ ಒಟ್ಟಾಗಿ ನಿಪಿ–14 ಎಂದು ಗುರುತಿಸಲಾಗಿದೆ. ಸದರಿ ದಾಖಲಾತಿಗಳ ನಮ್ಮ ಸಹಿಗಳನ್ನು ಸಹ ಪಡೆಯಲಾಯಿತು.

19. ಸದರಿ ದಿನ ಆರೋಪಿಯ ಮಾದರಿ ಧ್ವನಿಯನ್ನು ಪಡೆದುಕೊಳ್ಳಲಾಯಿತು. ಸದರಿ ಸಂಭಾಷಣೆಯನ್ನು ಸಿಡಿಗೆ ಪರಿವರ್ತಿಸಲಾಯಿತು. ಪೋಲೀಸರು ಸ್ಥಳದಲ್ಲಿ ಮಹಜರನ್ನು ತಯಾರಿಸಿದರು. ಸದರಿ ಮಹಜರನ್ನು ಈಗಾಗಲೇ ನಿಪಿ–15 ಎಂದು ಮತ್ತು ಅದರಲ್ಲಿರುವ ನನ್ನ ಸಹಿಯನ್ನು ನಿಪಿ–15(ಬಿ) ಎಂದು ಗುರುತಿಸಲಾಯಿತು. ಮಹಜರ್ ಕಾಲದಲ್ಲಿ ಪೋಟೋಗಳನ್ನು ತೆಗೆಯಲಾಯಿತು. ಪೋಟೋಗಳನ್ನು ಈಗಾಗಲೇ ಒಟ್ಟಾಗಿ ನಿಪಿ–8 ರಿಂದ 12 ಎಂದು ಗುರುತಿಸಲಾಗಿದೆ. ಪೊಲೀಸರು ಆರೋಪಿಯನ್ನು ಬಂಧಿಸಿ ದಸ್ತಗಿರಿ ಕ್ರಮ ಜರುಗಿಸಿರುತ್ತಾರೆ.

20. ಪ್ರಕರಣಕ್ಕೆ ಸಂಬಂಧಿಸಿದಂತೆ ನಾನು ಎಸಿಬಿ ಪೋಲೀಸರ ಮುಂದೆ ಹೇಳಿಕೆಯನ್ನು ನೀಡಿರುತ್ತೇನೆ.

**ಪಾಟೀಸವಾಲುಃ ಆರೋಪಿ ಪರ ವಕೀಲರಿಂದಃ-**

21. ಆರೋಪಿಯ ದಸ್ತಗಿರಿ ಕ್ರಮವೆಂದರೆ ಆರೋಪಿಯನ್ನು ವಶಕ್ಕೆ ಪಡೆದು ಅಲ್ಲಿಂದ ಕರೆದುಕೊಂಡು ಹೋಗಿರುತ್ತಾರೆ. ದಸ್ತಗಿರಿಯ ಬಗ್ಗೆ ಯಾವುದೇ ದಾಖಲೆ ಮಾಡಿರುವುದಿಲ್ಲ. ನನ್ನ ಹೇಳಿಕೆಯನ್ನು 15.07.2017 ರಂದು ಮಾಡಿರುತ್ತಾರೆ. ಹೇಳಿಕೆಯನ್ನು ಮಾಡುವ ಮೊದಲು ನನಗೆ ದೂರು, ಪ್ರಾಯೋಗಿಕ ಪಂಚನಾಮೆ ಹಾಗೂ ಟ್ರಾಪ್ ಪಂಚನಾಮೆಯ ಪ್ರತಿಯನ್ನು ನೀಡಿರುವುದಿಲ್ಲ.

22. ಆರೋಪಿ ಮತ್ತು ಚಾಸಾ-1 ರವರ ನಡುವೆ ನಡೆದಿದೆ ಎಂದು ಹೇಳಲಾದ ವಾಯ್ಸ್ ರೆಕಾರ್ಡರ್ ಮತ್ತು ಮೆಮರಿ ಚಿಪ್ ಹಾಗೂ ಮಾದರಿ ಧ್ವನಿ ಸಂಭಾಷಣೆಯನ್ನು ಯಥವತ್ತಾಗಿ ನನಗೆ ಹೇಳಲು ಆಗುವುದಿಲ್ಲ. ನನ್ನ ಹೇಳಿಕೆಯಲ್ಲಿ ಈ ಮೂರು ಸಂಭಾಷಣೆಗಳನ್ನು ನಾನು ಯಥವತ್ತಾಗಿ ಹೇಳಿ ಬರೆಸಿರುತ್ತೇನೆ. ಈಗ ನನಗೆ ಸದರಿ ಸಂಭಾಷಣೆಗಳನ್ನು ಓದಲು ಕೊಟ್ಟು ನಂತರ ಅದನ್ನು ಯಥವತ್ತಾಗಿ ಹೇಳಲು ಆಗುವುದಿಲ್ಲ.

23. ವಾಯ್ಸ್ ರೆಕಾರ್ಡರಿನಲ್ಲಿ ಇದ್ದ ಸಂಭಾಷಣೆಯಲ್ಲಿ ಆರೋಪಿಯು ತನಗೆ ಸ್ವಲ್ಪ ಹಣ ಕೊಟ್ಟಿದ್ದಾರೆ, ಇದು ಸಾಕಾಗಲ್ಲ ಎಂದು ಹೇಳಿರುವುದು ರೆಕಾರ್ಡ್ ಆಗಿತ್ತೇ ಎಂದರೆ ಸಾಕ್ಷಿ ಅದು ವಾಯ್ಸ್ ರೆಕಾರ್ಡರಿನಲ್ಲಿ ರೆಕಾರ್ಡ್ ಆಗಿರಲಿಲ್ಲ ಅದು ಮೆವರಿ ಚಿಪ್ಪಿನಲ್ಲಿ ಇದ್ದ ಸಂಭಾಷಣೆಯಲ್ಲಿ ಅದು ಇದ್ದು ನಾನು ಮುಖ್ಯ ವಿಚಾರಣೆಯಲ್ಲಿ ನಾನು ಗೊಂದಲದಿಂದ ತಪ್ಪಾಗಿ ಹೇಳಿರುತ್ತೇನೆ ಎಂದು ಹೇಳುತ್ತಾರೆ. ಸದರಿ ಸಂಭಾಷಣೆಯು ಮೆಮರಿ ಚಿಪ್ಪಿನಲ್ಲಿ ಇದ್ದ ಸಂಭಾಷಣೆಯಲ್ಲಿಯು ಇಲ್ಲ ಎಂದರೆ ಸರಿಯಲ್ಲ. ಆರೋಪಿಯು ತನಗೆ ಸ್ವಲ್ಪ ಹಣ ಕೊಟ್ಟಿದ್ದಾರೆ, ಇದು ಸಾಕಾಗಲ್ಲ ಎಂದು ಹೇಳಿದ್ದಾರೆ ಎಂದು ನಾನು ಹೇಳಿಕೆಯಲ್ಲಿ ಹೇಳಿರುವುದಿಲ್ಲ. ನಿಪಿ-13 ರಲ್ಲಿ ದಾಖಲಿಸಿದ ಸಂಭಾಷಣೆಯಲ್ಲಿ ಈ ಸಂಭಾಷಣೆಯನ್ನು ದಾಖಲಿಸಲಾಗಿದೆ. ಅದನ್ನು ನಿಪಿ-13 ರಲ್ಲಿ ಬರೆದಿರುವುದಿಲ್ಲ ಎಂದರೆ ಸರಿಯಲ್ಲ.

24. ಪ್ಯಾಂಟ್‌ನ ಎಡಭಾಗದ ಜೇಬನ್ನು ಪೋಲೀಸರು ದ್ರಾವಣದಲ್ಲಿ ತೊಳೆಸಿದಾಗ ಸದರಿ ದ್ರಾವಣವು ಗಾಢ ಗುಲಾಬಿ ಬಣ್ಣಕ್ಕೆ ತಿರುಗಿತು ಎಂದು ನಿಪಿ-15 ಟ್ರಾಪ್ ಮಹಜರಲ್ಲಿ ಹಾಗೂ ನನ್ನ ಹೇಳಿಕೆಯಲ್ಲಿ ಹೇಳಿರುತ್ತೇನೆ. ಆರೋಪಿಯು ಟ್ರಾಪ್ ಸಮಯದಲ್ಲಿ ರೆಕಾರ್ಡ್ ಆದ ಸಂಭಾಷಣೆಯಲ್ಲಿ ದುಡ್ಡನ್ನು ತೆಗೆದುಕೊಂಡು ಆದಷ್ಟು ಬೇಗ ರಿಪೋರ್ಟ್ ಕೊಡುವುದಾಗಿ ಹೇಳಿದ್ದು ವಾಯ್ಸ್

ರೆಕಾರ್ಡರಿನಲ್ಲಿ ದಾಖಲಾಗಿದ್ದು ಈ ವಿಷಯನ್ನು ನಿಪಿ-15 ಟ್ರಾಪ್ ಮಹಜರಲ್ಲಿ ಹಾಗೂ ನನ್ನ ಹೇಳಿಕೆಯಲ್ಲಿ ಹೇಳಿರುತ್ತೇನೆ.

25. ದಿಃ14.07.2017 ರಂದು ನನ್ನನ್ನು ಎಸಿಬಿ ಕಛೇರಿಗೆ ಕಳುಹಿಸಿಕೊಟ್ಟ ಬಗ್ಗೆ ಯಾವುದೇ ಮೆಮೊ ನೀಡಿರುವುದಿಲ್ಲ ಹಾಗೂ ಎಸಿಬಿ ಕಛೇರಿ ನಮ್ಮ ಕಛೇರಿಯ ಪಕ್ಕದಲ್ಲೇ ಇದ್ದ ಕಾರಣ ನಾನೇ ಅಲ್ಲಿಗೆ ಹೋಗಿದ್ದು ನನ್ನನ್ನು ಕರೆದುಕೊಂಡು ಹೋಗಲು ಯಾರು ಬಂದಿರುವುದಿಲ್ಲ. ನನ್ನನ್ನು ಎಸಿಬಿ ಕಛೇರಿಗೆ ಹೋಗುವಂತೆ ನನ್ನ ಮೇಲಾಧಿಕಾರಿಗಳು ನನಗೆ ಸೂಚಿಸಿದಾಗ ಮಧ್ಯಾಹ್ನ 12.00 ಗಂಟೆಯಾಗಿತ್ತು. ನಾನು ಎಸಿಬಿ ಕಛೇರಿಗೆ ಮಧ್ಯಾಹ್ನ 3.30 ಗಂಟೆಗೆ ಹೋಗಿರುತ್ತೇನೆ. ಎಸಿಬಿ ಸಿಬ್ಬಂದಿ ನಮ್ಮ ಕಛೇರಿಗೆ ಬಂದು ಎಷ್ಟು ಗಂಟೆಗೆ ವಿನಂತಿ ಮಾಡಿರುತ್ತಾರೆ ಎಂದು ನಾನು ಕೇಳಿರುವುದಿಲ್ಲ. ನನ್ನನ್ನು ದಿಃ14.07.2017 ರಂದು ಮತ್ತು 15.07.2017 ರಂದು ಎಸಿಬಿ ಪೊಲೀಸರು ಕರೆಸಿದ್ದು ಬಿಟ್ಟರೆ ಯಾವುದೇ ದಿನ ನನ್ನನ್ನು ಕರೆದಿರುವುದಿಲ್ಲ. ನನ್ನ ಮೇಲಾಧಿಕಾರಿಗಳು ನನಗೆ ಎಸಿಬಿ ಪೊಲಿಸರಿಗೆ ತನಿಖೆಗೆ ಸಹಕರಿಸಬೇಕು ಮತ್ತು ಅವರ ಸೂಚನೆಯಂತೆ ನಡೆದುಕೊಳ್ಳಬೇಕು ಎಂದು ಹೇಳಿ ಕಳುಹಿಸಿದ್ದರು ಎಂದರೆ ಸರಿ. ಅದೇ ಪ್ರಕಾರ ನಾನು ದಿಃ14.07.2017 ರಂದು ಮತ್ತು 15.07.2017 ರಂದು ನಡೆದುಕೊಂಡಿದ್ದೇನೆ ಎಂದರೆ ಸರಿ.

26. ನಾನು ಈ ದಿನವೂ ಕರ್ತವ್ಯದ ಮೇಲೆ ನ್ಯಾಯಾಲಾಯಕ್ಕೆ ಹಾಜರಾಗಿದ್ದೇನೆ ಎಂದರೆ ಸರಿ. ದಾಖಲಾತಿಗಳ ವಿರುದ್ಧ ಹೇಳಿಕೆಯನ್ನು ಕೊಟ್ಟರೆ ನಮ್ಮ ವಿರುದ್ಧ ಇಲಾಖಾ ವಿಚಾರಣೆ ನಡೆಯುವ ಇರುತ್ತದೆ ಎಂದರೆ ಸರಿ. ಎಸಿಬಿ ಪೊಲೀಸರು ದಾಖಲಾತಿಗಳಲ್ಲಿ ಇದ್ದಂತೆ ಹೇಳಿಕೆಯನ್ನು ಕೊಡದೇ ಇದ್ದಲ್ಲಿ ನನ್ನ ವಿರುದ್ಧ ಇಲಾಖಾ ವಿಚಾರಣೆ ಜರುಗಿಸಲು ಕ್ರಮ ಕೈಗೊಳ್ಳಲಾಗುವುದು ಎಂದು ಹೆದರಿಸಿದ ಕಾರಣ ದಾಖಲಾತಿಗಳಲ್ಲಿ ಇದ್ದಂತೆ ಅದನ್ನು ಓದಿ ನೋಡಿ ಕಂಠಪಾಟ ಮಾಡಿ ನ್ಯಾಯಾಲಯದ ಮುಂದೆ ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

27. ಸರ್ವೇ ನಂ.610/4 ರ ಮತ್ತು ನಂ.610/6 ರ ಪ್ರತ್ಯೇಕ ವಿಸ್ತೀರ್ಣ ಎಷ್ಟಿತ್ತು ಎಂದು ನನಗೆ ಗೊತ್ತಿಲ್ಲ. ಒಟ್ಟು ವಿಸ್ತೀರ್ಣ ಗೊತ್ತು. ಚಾಸಾ-1 ರವರಿಗೆ ಸಂಬಂಧಪಟ್ಟಂತೆ ಆರೋಪಿಯಿಂದ ಆಗಬೇಕಾದ ಯಾವುದಾದರು ಕೆಲಸ ಬಾಕಿ ಇತ್ತೇ ಎಂಬ ಬಗ್ಗೆ ನನಗೆ ಗೊತ್ತಿಲ್ಲ. ಸದರಿ ಜಮೀನಿನ

ಪಹಣಿಗಳು ತೆರೆಸಾ ಸುಪಿರಿಯರ್ ಎಂಬ ಹೆಸರಿನಲ್ಲಿದ್ದವು. ನಿಪಿ–14 ರಲ್ಲಿ ಆರೋಪಿಗೆ ಜಿಲ್ಲಾಧಿಕಾರಿ ಕಛೇರಿಯಿಂದ ಕಳುಹಿಸಿದ ಯಾವುದಾದರು ದಾಖಲಾತಿಗಳು ಕಂಡು ಬಂತೇ ಎಂದರೆ ಸಾಕ್ಷಿಯು ತನಗೆ ಭೂದಾಖಲೆಗಳ ಬಗ್ಗೆ ಅಷ್ಟು ತಿಳುವಳಿಕೆ ಇಲ್ಲದೇ ಇರುವ ಕಾರಣ ಅದು ತಿಳಿದಿಲ್ಲ ಆದರೆ ನಾನು ದಾಖಲಾತಿಗಳನ್ನು ನೋಡಿದ್ದೇನೆ ಎಂದು ಹೇಳುತ್ತಾರೆ. ಆರೋಪಿಯು Alienation Report ಬಾಕಿ ಇಟ್ಟಿದ್ದರು ಎಂದು ತಿಳಿದು ಬಂತು. ನಿಪಿ–14 ನ್ನು ನೋಡಿ ಹಾಗೆ ಅದು ಎಲ್ಲಿ ಬಾಕಿ ಇದೆ ಎಂದು ನನಗೆ ಹೇಳಲು ಆಗುವುದಿಲ್ಲ.

28. ಆರೋಪಿಯ ಬಳಿ ಚಾಸಾ–1 ರವರಿಗೆ ಸಂಬಂಧಪಟ್ಟ ಕಡತ ಯಾವ ದಿನಾಂಕದಂದು ಬಂತು ಎಂದು ನನಗೆ ನೆನಪಿಲ್ಲ. ನಿಪಿ–14 ರ ಪುಟಸಂಖ್ಯೆ 165 ರಲ್ಲಿ ಇರುವ ದಾಖಲಾತಿ ಪ್ರಕಾರ ರಾಜಸ್ವ ನಿರೀಕ್ಷಕರಿಗೆ ಕಳುಹಿಸಿರುವ ಬಗ್ಗೆ ಕಂಡು ಬರುತ್ತದೆ. ನಾನು ಚಾಸಾ–1 ರವರು ಅದನ್ನು ಆರೋಪಿಗೆ ಕಳುಹಿಸಿದ್ದಾರೆ ಎಂದು ಹೇಳಿದ್ದು ಈ ಬಗ್ಗೆ ವಿವರಣೆಯನ್ನು ಚಾಸಾ–1 ರವರಲ್ಲಿ ಕೇಳಿರುವುದಿಲ್ಲ. ಚಾಸಾ–1 ರವರನ್ನು ತೆರೆಸಾರವರು ತನ್ನನ್ನು ಪ್ರತಿನಿಧಿಸಬೇಕು ಎಂದು ಹೇಳಿದ್ದಾರೆ ಎಂದು ನನಗೆ ತಿಳಿದು ಬಂತು ಆ ಬಗ್ಗೆ ನಾನು ದಾಖಲಾತಿಯನ್ನು ನೋಡಿರುವುದಿಲ್ಲ.

29. ನಿಪಿ–14 ರ ಪುಟಸಂಖ್ಯೆ 167 ರ ಪ್ರಕಾರ ಅರ್ಜಿಯನ್ನು ತೆರೆಸಾರವರು ದಿಃ17.05.2017 ರಂದು ನೀಡಿದ್ದು ಕಂಡು ಬರುತ್ತದೆ ಎಂದರೆ ಸರಿ. ನಿಪಿ–14 ರ ಪುಟಸಂಖ್ಯೆ 164 ರ ಪ್ರಕಾರ ರಾಜಸ್ವ ನಿರೀಕ್ಷಕರು ಒಂದು ಮಹಜರನ್ನು ಮಾಡಿದ್ದು ಕಂಡಬರುತ್ತದೆ ಎಂದರೆ ಸರಿ. ಈ ಎರಡು ಹಾಳೆಗಳಲ್ಲಿ ಇರುವ ತೆರೆಸಾರವರ ಸಹಿಗಳಲ್ಲಿ ವ್ಯತ್ಯಾಸವಿದೆ ಎಂದರೆ ಸರಿಯಲ್ಲ. (ಮಾನ್ಯ ವಿಶೇಷ ಸರ್ಕಾರಿ ಅಭಿಯೋಜಕರು ಈ ಪ್ರಶ್ನೆಯನ್ನು ಈ ಸಾಕ್ಷಿಗೆ ಹೇಳಲು ಬರುವುದಿಲ್ಲ ಎಂದು ಆಕ್ಷೇಪವೆತ್ತಿರುತ್ತಾರೆ.) ಈ ಎರಡು ಪುಟಗಳಲ್ಲಿ ನನ್ನ ಸಹಿ ಇದೆ ಎಂದರೆ ಸರಿ. ಸದರಿ ದಾಖಲಾತಿಗಳನ್ನು ನಾನು ನೋಡಿ ಸಹಿ ಮಾಡಿರುತ್ತೇನೆ. ಪುಟ 167 ರಲ್ಲಿ ತೆರೆಸಾ ಬಿ.ಎಂಬ ಸಹಿ ಇದ್ದು, ಪುಟ 164 ರಲ್ಲಿ ತೆರೆಸಾ ಎಂದು ಮಾತ್ರ ಎಂದರೆ ಸರಿ.

30. ಚಾಸಾ–1 ರವರು ನೀಡಿದ ದೂರಿನಲ್ಲಿ ನಿರ್ದಿಷ್ಟ ಸ್ಥಳದಲ್ಲಿ ಬಂದು ಹಣವನ್ನು ಕೊಡಬೇಕು ಎಂದು ಬರೆದಿರಲಿಲ್ಲ. ಚಾಸಾ–1 ರವರು ಹಾಜರು ಪಡಿಸಿದ ಮೆಮರಿ ಕಾರ್ಡು ಯಾವ

ಕಂಪನಿ ಮತ್ತು ಅದರ ಸಾಮರ್ಥ್ಯ ಎಷ್ಟು ಎಂದು ನಾನು ಗಮನಿಸಿರುವುದಿಲ್ಲ. ಹಾಗೆಯೇ ಸಂಭಾಷಣೆಯನ್ನು ಸಿಡಿಯಲ್ಲಿ ರೆಕಾರ್ಡ್ ಮಾಡಲು ಉಪಯೋಗಿಸಿದ ಸಿಡಿಗಳ ಕಂಪನಿ ಮತ್ತು ಅದರ ಸಾಮರ್ಥ್ಯ ಎಷ್ಟು ಎಂದು ನನಗೆ ಹೇಳಲು ಆಗುವುದಿಲ್ಲ. ಸದರಿ ಸಿಡಿಗಳನ್ನು ಬರ್ನ್ ಮಾಡಲು ವರ್ಡ್ ಸಾಫ್ಟ್‌ವೇರನ್ನು ಉಪಯೋಗಿಸಿದ್ದಾರೆ. ಸಿಡಿಗಳನ್ನು ಬರ್ನ್ ಮಾಡಲು ವರ್ಡ್ ಸಾಫ್ಟ್‌ವೇರನ್ನು ಉಪಯೋಗಿಸಿದ್ದಾರೆ ಎಂದು ಮಹಜರಿನಲ್ಲಿ ಬರೆದಿರುವುದಿಲ್ಲ. ಸದರಿ ಸಿಡಿ ಪೂರ್ತಿಯಾಗಿ ರೆಕಾರ್ಡ್ ಆಗಿರುತ್ತದೆ. ವಾಯ್ಸ್ ರೆಕಾರ್ಡ್ ಯಾವ ಕಂಪನಿ ಮತ್ತು ಅದರ ಸಾಮರ್ಥ್ಯ ಎಷ್ಟು ಎಂದು ನನಗೆ ಗೊತ್ತಿಲ್ಲ.

31. ನಿಪಿ-13 ಪ್ರಾಯೋಗಿಕ ಪಂಚನಾಮೆಯ ಕಾಲದಲ್ಲಿ ನಾವೆಲ್ಲರೂ ಕೈಗಳನ್ನು ತೊಳೆದಿದ್ದೇವೆ ಎಂದು ಬರೆಯಲಾಗಿದೆ. ಆ ಸಮಯದಲ್ಲಿ ಫೋಟೊಗಳನ್ನು ತೆಗೆದಿರುವುದಿಲ್ಲ. ನಿಪಿ-13 ರಲ್ಲಿ ಬರೆದಿರುವ ವಿಷಯಗಳನ್ನು ನಾನು ಅಥವಾ ಚಾಸಾ-3 ರವರು ಉಕ್ತಲೇಖನ ನೀಡಿ ಬರೆಸಿರುವುದಿಲ್ಲ.

32. ಚಾಸಾ-1 ರವರು ಆ ದಿನ ಎಸಿಬಿ ಕಛೇರಿಯಿಂದ ಜೇಪಿನಲ್ಲಿ ಹೋಗಿರುವುದಿಲ್ಲ ಎಂದರೆ ನಾನು ಅದನ್ನು ಗಮನಿಸಿರುವುದಿಲ್ಲ. ಆರೋಪಿಯು ಚಾಸಾ-1 ರವರನ್ನು ತನ್ನ ಕಛೇರಿಗೆ ಬರಲು ಹೇಳಿದ್ದರು ಎಂಬ ಬಗ್ಗೆ ಯಾವ ದಾಖಲಾತಿಯಲ್ಲಿ ಕಂಡು ಬಂದಿರುವುದಿಲ್ಲ. ಅವರ ಮಧ್ಯೆ ಇರುವ ಸಂಭಾಷಣೆಯಲ್ಲಿ ಅದು ಇತ್ತು.

33. ನಾನು ಹೇಳುವಂತೆ ನಿಪಿ-13 ರಂತೆ ಯಾವುದೇ ಮಹಜರ್ ಎಸಿಬಿ ಕಛೇರಿಯಲ್ಲಿ ಮಾಡಿರುವುದಿಲ್ಲ ಮತ್ತು ಅದನ್ನು ಈ ಕೇಸಿಗೆ ಪೂರಕವಾಗುವಂತೆ ತಯಾರಿಸಲಾಗಿದೆ ಮತ್ತು ನಾನು ಸರ್ಕಾರಿ ಅಧಿಕಾರಿಯಾಗಿರುವ ಕಾರಣ ಎಸಿಬಿ ಪೊಲೀಸರ ಮಾತು ಕೇಳಿ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

34. ನಾವು ತಾಲ್ಲೂಕು ಕಛೇರಿಯ ಆವರಣ ಒಳಗಡೆ ನಿಂತಿದ್ದೆವು. ತಾಲ್ಲೂಕು ಕಛೇರಿಯ ಕಟ್ಟಡದಲ್ಲಿ ಎಷ್ಟು ಮಹಡಿಗಳಿವೆ ಎಂದು ನಾನು ನೋಡಿರುವುದಿಲ್ಲ. ಸದರಿ ಕಛೇರಿಯಲ್ಲಿ ಆರೋಪಿಗೆ ಸೇರಿದ ಪ್ರತ್ಯೇಕ ಕೊಠಡಿ ಇರಲಿಲ್ಲ ಎಲ್ಲರಿಗೂ ಒಟ್ಟಿಗೆ ಕುಳಿತು ಕೆಲಸ ಮಾಡುತ್ತಿದ್ದರು. ಹಾಗೇ ಅವರು ಕೆಲಸ ಮಾಡುತ್ತಿದ್ದದ್ದು ನೆಲ ಮಹಡಿಯಲ್ಲಿ ಆಗಿರುತ್ತದೆ. ಚಾಸಾ-1 ರವರು ಸೂಚನೆ ನೀಡಿದ ನಂತರ

ಒಳಗಡೆ ಹೋದಾಗ ಆರೋಪಿಯು ಕೊಠಡಿಯ ಒಳಗಡೆ ಇದ್ದರು. ಸದರಿ ಕೊಠಡಿಯಲ್ಲಿ ಆರೋಪಿ ಬಿಟ್ಟರೆ ಸದರಿ ಕಛೇರಿಯ ಬೇರೆ ಸಿಬ್ಬಂದಿ ಅಥವಾ ಸಾರ್ವಜನಿಕರು ಅಲ್ಲಿ ಇರಲಿಲ್ಲ. ನಾವು ಹೋದ ನಂತರ ಮತ್ತು ಆರೋಪಿಯ ಕೈಗಳನ್ನು ಹಿಡಿದ ನಂತರ ಅಕ್ಕಪಕ್ಕದ ಕೊಠಡಿಯಲ್ಲಿದ್ದ ಬೇರೆ ನೌಕರರು ಅಲ್ಲಿಗೆ ಬಂದಿದ್ದರು. ಸದರಿ ನೌಕರರಿಗೆ ತನಿಖೆಯಲ್ಲಿ ಸಹಕರಿಸುವಂತೆ ಮತ್ತು ನಮೊಂದಿಗೆ ಇರುವಂತೆ ಪೊಲೀಸರು ಕೇಳಿಕೊಂಡಿರುವುದಿಲ್ಲ.

35. ಆರೋಪಿಯನ್ನು ವಿಚಾರಣೆ ಮಾಡಿ ಅವರನ್ನು ವಶಕ್ಕೆ ತೆಗೆದುಕೊಳ್ಳುವ ಸಮಯದಲ್ಲಿ ಚಾಸಾ-1ರವರಿಂದ ವಾಯ್ಸ್ ರೆಕಾರ್ಡರನ್ನು ಪಡೆದುಕೊಂಡರು. ವಾಯ್ಸ್ ರೆಕಾರ್ಡರನ್ನು ಪಡೆದುಕೊಂಡಾಗ ಅದು ಆಫ್ ಆಗಿತ್ತು. ಚಾಸಾ-1ರವರು ಹೊರಗಡೆ ಬರುವ ಸಮಯದಲ್ಲಿ ಅದನ್ನು ಆಫ್ ಮಾಡಿಕೊಂಡು ಬಂದಿದ್ದರು.

36. ನಿಪಿ-15 ಟ್ರ್ಯಾಪ್ ಮಹಜರನ್ನು ನಾನು ಓದಿ ನೋಡಿ ಸಹಿ ಮಾಡಿರುತ್ತೇನೆ. ಹಾಗೆ ಓದಿ ನೋಡಿದಾಗ ಅದರಲ್ಲಿ ತಪ್ಪು ಕಂಡು ಬಂದ್ದಲ್ಲಿ ಅದು ತಪ್ಪು ಇದೆ ಎಂದು ಹೇಳಲು ಅವಕಾಶ ಇದೆ ಎಂದರೆ ಸರಿ. ನಾನು ನಿಪಿ-15ರಲ್ಲಿ ತಪ್ಪು ಇದೆ ಎಂದು ಅದೇ ದಿನ ಅಥವಾ ಮಾರನೆಯ ದಿನ ಪೊಲೀಸರ ಗಮನಕ್ಕೆ ತಂದಿರುವುದಿಲ್ಲ. ವಾಯ್ಸ್ ರೆಕಾರ್ಡರಿನಲ್ಲಿ ನಿಪಿ-15ರಲ್ಲಿ ಹೇಳಿದಂತೆ ರೂ.40,000/-ಕ್ಕೆ ಬೇಡಿಕೆ ಇಟ್ಟು ಆದಷ್ಟು ಬೇಗ ರಿಪೋರ್ಟ್ ನೀಡುವುದಾಗಿ ಹೇಳಿದ್ದು ರೆಕಾರ್ಡ್ ಆಗಿರುತ್ತದೆ. ಈಗ ನಾನು ನಿಪಿ-15ರ ಪು.ಸಂ.9ರಲ್ಲಿ ವಾಯ್ಸ್ ರೆಕಾರ್ಡರಿನಲ್ಲಿ ಇದೆ ಎಂದು ಹೇಳಲಾದ ಸಂಭಾಷಣೆಯ ವಿವರವನ್ನು ಹೇಳುತ್ತಿದ್ದು ಅದರಲ್ಲಿ ಮೇಲೆ ಹೇಳಿದ ವಿವರ ಇರುವುದಿಲ್ಲ. ನಾನು ಈ ಬಗ್ಗೆ ಚಾಸಾ-1ರವರ ಬಳಿ ವಿವರಣೆಯನ್ನು ಕೇಳಿರುವುದಿಲ್ಲ.

37. ನಿಪಿ-15ರಲ್ಲಿ ಪ್ಯಾಂಟಿನ ಬಲಜೇಬು ತೊಳೆದಿದ್ದಾರೆ ಎಂದು ಬರೆಯಲಾಗಿದೆ. ಆದರೆ ಎಡಜೇಬಿನ್ನು ತೊಳೆಯಲಾಗಿತ್ತು. ಅದನ್ನು ಆ ರೀತಿ ಏಕೆ ಬರೆದಿದ್ದಾರೆ ಎಂದು ಪ್ರಶ್ನಿಸಿದ್ದೀರಾ ಎಂದರೆ ಸಾಕ್ಷಿಯು ನಾನು ಆ ಸಮಯದಲ್ಲಿ ಅದನ್ನು ಅಷ್ಟಾಗಿ ಗಮನಿಸಿರಲಿಲ್ಲ. ನಿಪಿ-15ರಲ್ಲಿ ಬಲಜೇಬು ತೊಳೆದಿದ್ದಾರೆ ಎಂದು ಬರೆದದ್ದು ಸುಳ್ಳು ಎಂದು ಹೇಳುತ್ತಿದ್ದೀರಾ ಎಂದರೆ ಸಾಕ್ಷಿಯು ಅದು ಕಣ್ತಪ್ಪಿನಿಂದ ಆಗಿರಬಹುದು ಎಂದು ಹೇಳುತ್ತಾರೆ. ನಾನು ನನ್ನ ಹೇಳಿಕೆ ಕೊಡುವ ಸಮಯದಲ್ಲಿ ಈ ತಪ್ಪನ್ನು

ಗಮನಿಸದೇ ಇದ್ದ ಕಾರಣ ಆ ಬಗ್ಗೆ ನನ್ನ ಹೇಳಿಕೆಯಲ್ಲಿ ಹೇಳಿರುವುದಿಲ್ಲ. ನಿಪಿ-15 ನ್ನು ನನಗೆ ಓದಲು ಕೊಟ್ಟಿರುವುದಿಲ್ಲ ಮತ್ತು ನನ್ನ ಸಹಿಯನ್ನು ಮಾತ್ರ ಪಡೆದಿದ್ದಾರೆ ಎಂದರೆ ಸರಿಯಲ್ಲ. ನಾನು ಅದನ್ನು ಓದಿ ನೋಡಿದ್ದು ಈ ತಪ್ಪನ್ನು ಆಗ ಗಮನಿಸಿರಲಿಲ್ಲ. ನಿಪಿ-15 ರಲ್ಲಿ ಬಲಜೇಬು ತೊಳೆದದ್ದು ಎಂದು ಬರೆದದ್ದನ್ನು ಓದಿರುತ್ತೇನೆ ಆದರೆ ತಪ್ಪನ್ನು ಗಮನಿಸಿರಲಿಲ್ಲ. ನಾನು ಗಮನಿಸಿರಲಿಲ್ಲ ಎಂದರೆ ಅದನ್ನು ನೋಡಿಲ್ಲ ಎಂದು ಅರ್ಥವಾಗುತ್ತದೆ ಎಂದರೆ ಸರಿಯಲ್ಲ.

38. ಆರೋಪಿಯ ಮನೆಗೆ ಕರೆ ಮಾಡಿ ಮನೆಯಿಂದ ಬದಲಿ ಪ್ಯಾಂಟನ್ನು ಅವರ ಸ್ನೇಹಿತರು ತಂದು ಕೊಟ್ಟರು, ಬದಲಿ ಪ್ಯಾಂಟಿನ ಬಣ್ಣವನ್ನು ನಾನು ಗಮನಿಸಿರುವುದಿಲ್ಲ. ಪ್ಯಾಂಟಿನ ಜೇಬನ್ನು ತೊಳೆದ ಎಷ್ಟು ಸಮಯದ ನಂತರ ಪ್ಯಾಂಟನ್ನು ಪ್ಯಾಕ್ ಮಾಡಿದರು ಎಂದು ನನಗೆ ಗೊತ್ತಿಲ್ಲ. ಪ್ಯಾಂಟಿನ ಜೇಬು ಯಾವ ಬಣ್ಣದ್ದು ಎಂದು ನಾನು ಸರಿಯಾಗಿ ನೋಡಿರುವುದಿಲ್ಲ. ಸದರಿ ಪ್ಯಾಂಟಿನ ಜೇಬು ಸೋಡಿಯಂ ಕಾರ್ಬೋನೇಟ್ ದ್ರಾವಣದಲ್ಲಿ ತೊಳೆದ ನಂತರ ಗುಲಾಬಿ ಬಣ್ಣಕ್ಕೆ ತಿರುಗಿರುವುದಿಲ್ಲ. ಸದರಿ ಜೇಬನ್ನು ತೊಳೆದ ಬಗ್ಗೆ ಯಾವುದೇ ಗುರುತನ್ನು ಮಾಡಿರುವುದಿಲ್ಲ.

39. ಆರೋಪಿಯು ಯಾವುದೇ ದಾಖಲಾತಿಗಳನ್ನು ಹಾಜರು ಪಡಿಸಿಲ್ಲ ಮತ್ತು ದಾಖಲಾತಿಗಳನ್ನು ಕಂದಾಯ ನಿರೀಕ್ಷಕರ ಕಛೇರಿಯಿಂದ ತರಿಸಲಾಯಿತು ಎಂದರೆ ಇರಬಹುದು. ಚಾಸಾ-4 ರವರು ಯಾವುದೇ ಧ್ವನಿಯನ್ನು ಗುರುತಿಸಿರುವುದಿಲ್ಲ ಎಂದರೆ ಸರಿಯಲ್ಲ.

40. ಪ್ರತ್ಯೇಕವಾದ ಹಾಳೆಯಲ್ಲಿ ಎರಡು ಗೆರೆ ಸಂಭಾಷಣೆಯನ್ನು ಬರೆದು ಅದನ್ನು ಓದಿಸಿ ಮಾದರಿ ಧ್ವನಿಯನ್ನು ಪಡೆದಿದ್ದಾರೆ. ಸದರಿ ಹಾಳೆಗೆ ನನ್ನ ಸಹಿಯನ್ನು ಮಾಡಿರುವುದಿಲ್ಲ. ಆರೋಪಿಯು ಚಾಸಾ-1 ರವರು ತನ್ನ ಸ್ನೇಹಿತನಾಗಿದ್ದು ಯಾವುದೋ ಒಂದು ಹಾಳೆಯನ್ನು ನನ್ನ ಜೇಬಿಗೆ ಹಾಕಿದ ಮತ್ತು ನಾನು ಆತನಿಂದ ಯಾವುದೇ ಹಣವನ್ನು ಪಡೆದುಕೊಂಡಿಲ್ಲ ಎಂದು ಸಮಜಾಯಿಷಿಯಲ್ಲಿ ಹೇಳಿದ್ದಾರೆ ಎಂದರೆ ಸರಿ. ತಾಲ್ಲೂಕು ಕಛೇರಿ ಮಿನಿ ವಿಧಾನಸೌದ ಕಟ್ಟಡದಲ್ಲಿ ಇರುತ್ತದೆ. ಅಲ್ಲಿ ಸಾಕಷ್ಟು ಸಿಸಿಟಿವಿಗಳು ಇರುತ್ತವೆ.

41. ನಿಪಿ-15 ರ ಸಮಯದಲ್ಲಿ ನಮಗೆ ಆರೋಪಿಯು ಯಾವುದೇ ಹಣವನ್ನು ಕೇಳಿರುವುದಿಲ್ಲ ಮತ್ತು ಯಾವುದೇ ಹಣವನ್ನು ಪಡೆದಿರುವುದಿಲ್ಲ ಮತ್ತು ಆತನು ಮಾಡಬೇಕಾದ

ಯಾವುದೇ ಕೆಲಸ ಬಾಕಿ ಇರಲಿಲ್ಲ ಎಂದು ಕಂಡು ಬಂತು ಎಂದರೆ ಸರಿಯಲ್ಲ. ಚಾಸಾ-1 ರವರು ಮೋಸದಿಂದ ಆರೋಪಿಯ ಜೇಬಿಗೆ ಹಣ ಹಾಕಿದ್ದಾರೆ ಎಂದು ತಿಳಿದು ಬಂತು ಎಂದರೆ ಸರಿಯಲ್ಲ. ನಿಪಿ-15 ರಲ್ಲಿ ಚಾಸಾ-1 ರವರು ಕೊಠಡಿಯಿಂದ ಹೊರಗೆ ಬಂದು ಸೂಚನೆ ಕೊಟ್ಟರು ಎಂದು ಮಾತ್ರ ಬರೆಯಲಾಗಿದ್ದು, ಯಾವ ನಿರ್ದಿಷ್ಟ ಸ್ಥಳದಲ್ಲಿ ನಿಂತು ಕೊಟ್ಟಿದ್ದಾರೆ ಎಂದು ಬರೆದಿರುವುದಿಲ್ಲ. ಭೂಮಿ ಕೇಂದ್ರ ಕೊಠಡಿ ನಂ.8 ರಲ್ಲಿ ಲಂಚದ ಹಣವನ್ನು ನೀಡಲಾಗಿದೆ ಎಂದು ನಿಪಿ-15 ರಲ್ಲಿ ಬರೆಯಲಾಗಿದೆ.

42. ನಿಪಿ-15 ನ್ನು ನಾನು ಅಥವಾ ಚಾಸಾ-3 ರವರು ಉಖ್ತಲೇಖನ ಕೊಟ್ಟು ಬರೆಸಿರುವುದಿಲ್ಲ. ನಿಪಿ-15 ನ್ನು ಓದಿ ನೋಡಿದಾಗ ಅದನ್ನು ನಾನು ಮತ್ತು ಚಾಸಾ-3 ರವರು ಹೇಳಿದಂತೆ ಬರೆಯಲಾಗಿದೆ ಎಂದು ಕಂಡುಬರುತ್ತದೆ ಎಂದರೆ ಸರಿ. ನಾನು ಅದನ್ನು ಯಾಕೆ ಹಾಗೆ ಬರೆಯಲಾಗಿದೆ ಎಂದು ಪೊಲೀಸರಲ್ಲಿ ಕೇಳಿರುವುದಿಲ್ಲ.

43. ನಿಪಿ-15 ರ ಸಮಯದಲ್ಲಿ ನಾನು ಸ್ಥಳದಲ್ಲಿ ಇರಲಿಲ್ಲ ಮತ್ತು ಅದರಲ್ಲಿ ಏನು ಬರೆದಿದೆ ಎಂದು ನನಗೆ ತಿಳಿದಿರುವುದಿಲ್ಲ ಎಂದರೆ ಸರಿಯಲ್ಲ. ಮಾರನೆಯ ದಿನ ಎಸಿಬಿ ಕಛೇರಿಗೆ ಬೆಳಿಗ್ಗೆ 10.30-11.00 ಗಂಟೆ ಸುಮಾರಿಗೆ ಹೋಗಿ 1 ಗಂಟೆ ಇದ್ದು ಹಿಂತಿರುಗಿರುತ್ತೇನೆ. ನನಗೆ ಈ ಪ್ರಕರಣದ ಬಗ್ಗೆ ಯಾವುದೇ ವಿಷಯ ತಿಳಿಯದೇ ಇದ್ದರೂ ಸಹ ನಿಜಾಂಶ ಹೇಳಿದಲ್ಲಿ ನನ್ನ ವಿರುದ್ಧ ಇಲಾಖಾ ವಿಚಾರಣೆ ಜರುಗಬಹುದು ಎಂಬ ಕಾರಣಕ್ಕೆ ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**<u>ಮರುವಿಚಾರಣೆಃ ಇಲ್ಲ.</u>**

(ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಲಾಯಿತು)

ಓ ಹೇ ಕೇ ಸ ಇ ಎ ಒ

3 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಮೈಸೂರು.